ಖಳನಾಯಕನಂತೆ ಮಿಂಚುತ್ತಿದ್ದ ಸ್ವಾಮಿಯನ್ನು ಕಂಡರೆ ಅಂಜುತ್ತಿದ್ದ ಮಂಜಣ್ಣನಿಗೆ ವಿಷಯ ತಿಳಿದು ಚಂದ್ರಿಗೆ ನಾಕು ಏಟು ಹಾಕುವುದರೊಂದಿಗೆ ಈ ಪ್ರಕರಣ ಮುಕ್ತಾಯಗೊಂಡಿತ್ತು. ವಠಾರದ ಕಣ್ಣು ಕಿವಿಗಳು ಈ ದೃಶ್ಯಾವಳಿಗಳ ನೇರ ಪ್ರಸಾರದಿಂದ ಪಾವನಗೊಂಡವು. ಅಲ್ಲಿಗೆ ನಮಗೆಲ್ಲ ಜ್ಞಾನೋದಯವಾದ ಒಂದು ವಿಷಯ, "ಡಾನ್(ಮಾಮಿ) ಕೋ ಪಕಡನಾ ಮುಷ್ಕಿಲ್ ಹೀ ನಹೀ... ನಾ ಮುಮ್ಕಿನ್ ಹೈ...'' ಎನ್ನುವ ಕಹಿ ಸತ್ಯ! ಏನೇ ಕದ್ದರೂ ಎಂದೂ ರೆಡ್ ಹ್ಯಾಂಡಾಗಿ ಸಿಕ್ಕಿ ಹಾಕಿಕೊಳ್ಳದಂತೆ ನಿಪುಣ ಕಳ್ಳಿ ಮಾಮಿಯನ್ನು ಎದುರು ಹಾಕಿಕೊಳ್ಳುವುದು ಅಸಾಧ್ಯ ಎಂದು ಅರಿವಾಗಿ, ನಮ್ಮ ಹುಷಾರಿನಲ್ಲಿ ನಾವಿದ್ದು ಪರಿಸ್ಥಿತಿಯೊಂದಿಗೆ ರಾಜಿ ಮಾಡಿಕೊಂಡಿದ್ದೆವು.

ಅವಳ ನೈತಿಕ ದಿವಾಳಿತನಕ್ಕೆ ಸಾಕ್ಷಿಯಾದ ಘಟನೆಯಿದು. ಬೇಸಿಗೆ ರಜದಲ್ಲಿ ನಾವು ಓಣಿಯ ಮಕ್ಕಳೆಲ್ಲ ನಮ್ಮ ಅಂಗಳದಲ್ಲಿ ಸೇರಿಕೊಂಡು ಚಿಲಿಪಿಲಿ ಸದ್ದು ಮಾಡುತ್ತಾ ಗೊಂಬೆಯಾಟ ಆಡುತ್ತಿದ್ದರೆ ನಮ್ಮ ಗಲಾಟೆಗೆ ಸಿಟ್ಟಿನಿಂದ ಕೂಗಾಡಿಕೊಂಡು ಮಾಮಿ ಮೇಲೆ ಬರುವುದೆ ತಡ, ನಮ್ಮ ಮಕ್ಕಳ ತಂಡ ಹೆದರಿ ಅಂಗಳದಲ್ಲಿದ್ದ ನಮ್ಮ ಬಚ್ಚಲು ಕೋಣೆಯಲ್ಲಿ ಅಡಗಿಕೊಂಡಿತು. ಆಗಲೇ ಅವಳ ಕಳ್ಳ ಮನಸ್ಸು ಜಾಗೃತವಾಗಿ, ಹರಡಿದ್ದ ಆಟದ ಸಾಮನುಗಳಲ್ಲಿನ ನನ್ನ ಕೆಂಪುಬಣ್ಣದ ಫ್ರಾಕಿನ ಗೊಂಬೆಯನ್ನು ನಮ್ಮ ಕಣ್ಣ ಮುಂದೆಯೇ ಸೆರಗಿನಲ್ಲಿ ಮರೆಯಾಗಿಸಿದಾಗ ಬಾಗಿಲ ಸಂದಿಯಲ್ಲಿ ಕಣ್ಣು ತೂರಿಸಿ ನೋಡುತ್ತಿದ್ದ ನಮ್ಮೆಲ್ಲರ ಪುಟ್ಟ ಹೃದಯ ವಿಲವಿಲನೆ ಒದ್ದಾಡಿತ್ತು. ಆಕೆ ಮನೆಯ ನವರಾತ್ರಿಯ ಗೊಂಬೆ ಅಲಂಕಾರದಲ್ಲಿ ನನ್ನ ಗೊಂಬೆಗಾಗಿ ನನ್ನ ಕಣ್ಣುಗಳು ಆಸೆಯಿಂದ ಹುಡುಕಾಡಿದ್ದ ನೆನಪು ಇನ್ನು ಹಸಿಯಾಗಿದೆ! ಈ ಪ್ರಕರಣಕ್ಕೆ ವಠಾರದ ತಾಯಿಂದಿರೆಲ್ಲ ಮಾಮಿಯ ವಿರುದ್ಧ ಉಸಿರೆತ್ತದೆ ಇರುವುದು ಆಗ ನಮ್ಮ ಮುಗ್ಧ ಮನಸುಗಳ ತಿಳಿವಳಿಕೆಗೆ ಮೀರಿದ ವಿಷಯವಾಗಿತ್ತು.



ಕತ್ತಲ ಗವಿಯಂತಿದ್ದ ಮಾಮಿಯ ಮನೆಯ ಪಡಸಾಲೆ ಗೋಡೆಗೆ ತೂಗಿದ್ದ ದೇವರ ಪಟಗಳು ಆಕೆ ಮಾಡುವ ಕುಕೃತ್ಯಗಳಿಗೆ ಮೂಕ ಸಾಕ್ಷಿಯಾಗಿ ನೇತಾಡುತ್ತಿದ್ದವು. ಮನೆಯೆ ಮೊದಲ ಪಾಠ ಶಾಲೆ ಎನ್ನುವಂತೆ ಪ್ರಾಯೋಗಿಕ ನೆಲೆಯಲ್ಲಿ ಸಹ ತರಬೇತಿ ಪಡೆದು ಸ್ವಾಮಿ ಸಣ್ಣಪುಟ್ಟ ಕಳ್ಳತನ ಮಾಡುತ್ತಾ ಮಿನಿ ರೌಡಿಯಾಗಿ ಬಡ್ತಿ ಹೊಂದಿದ್ದ.

ನಮ್ಮ ಅಂಗಳದಲ್ಲಿ ಪ್ರಕಾಶಮಾನವಾಗಿ ಬೆಳಗುತ್ತಿದ್ದ ಹೊಸ ಬಲ್ಬಿನ ಜಾಗದಲ್ಲಿ ರಾತ್ರಿ ಕಳೆದು ಬೆಳಗಾಗುವಷ್ಟರಲ್ಲಿ ಹಾಳಾದ ಬಲ್ಬು ಕೂರುವುದು, ಶಾಂತಮ್ಮನವರು ತವರಿಗೆ ಹೋದಾಗ ಅಡುಗೆಯಲ್ಲಿ ಮೈ ಮರೆತ ರಂಗನಾಥ ರಾಯರ ಕಣ್ಣು ತಪ್ಪಿಸಿ ಹಾಲಿನಲ್ಲಿದ್ದ ಗೋಡೆ ಗಡಿಯಾರ ಕದ್ದಿದ್ದು, ಧನಂಜಯರಾಯರ ಸೈಕಲ್ ಬಲ್ಬು, ಅಂಗಳದಲ್ಲಿ ಒಣಹಾಕಿದ್ದ ರಾವಣ ಪಾತ್ರಕ್ಕೆ ಉಡುತ್ತಿದ್ದ ಗುಲಾಬಿ ರೇಶಿಮೆ ಕಚ್ಚೆ–ಪಂಚೆ ಎಗರಿಸಿದ್ದು ಸ್ವಾಮಿಯ ತರಬೇತಿಯ ದಿನಗಳೆ ಆಗಿದ್ದವು ಎನ್ನಬಹುದು!

ರೌಡಿ ಸ್ವಾಮಿಯ ಚರಿತ್ರೆ ಗೊತ್ತಿದ್ದ ಅಮ್ಮ ಹಾಗೂ ನಾವು ಮೂರು ಹೆಣ್ಣುಮಕ್ಕಳು ಇಂಥ ಸಣ್ಣ ಪುಟ್ಟ ಚೋರ ಕೃತ್ಯಗಳಿಗೆ ಆಪಾದನೆ ಹೊರಿಸಿ, ಅವನ ಕೆಂಗಣ್ಣಿಗೆ ಗುರಿಯಾಗುವ ಧೈರ್ಯ ಮಾಡಿದ್ದೇ ಇಲ್ಲ. ಅವನೂ ಸಹ ಅಮ್ಮನನ್ನು, ''ಏನಕ್ಕಾ! ಚೆನ್ನಾಗಿದ್ದೀರಾ, ಊಟ ಆಯ್ತಾ?'' ಎಂದು ಗೌರವದಿಂದ ಮಾತಾಡಿಸುತ್ತ, ರಸ್ತೆಯಲ್ಲಿ ಓಡಾಡುವ ಹುಡುಗಿಯರನ್ನು ಚುಡಾಯಿಸಿದರೂ ನಮ್ಮ ವಠಾರದ ಐದಾರು ಹೆಣ್ಣುಮಕ್ಕಳ ತಂಟೆಗೆ ಎಂದಿಗೂ ಬರುತ್ತಿರಲಿಲ್ಲ! ಇದೊಂದು ರೀತಿ ನಾವೆಲ್ಲ ಸಿನಿಮಾ ಖಳನಾಯಕನ ತಂಗಿಯರಂತಿದ್ದು, ನಮ್ಮ ಬಡಾವಣೆಯಲ್ಲಿ ರೌಡಿ ಸ್ವಾಮಿ ವಠಾರದ ಹೆಣ್ಣುಮಕ್ಕಳು ಎನ್ನುವ ಸುರಕ್ಷಿತ ಭಾವವೂ ಇತ್ತೆನ್ನಿ!